# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ: ಆಲಮಟ್ಟಿ ಅಣೆಕಟ್ಟು ಪ್ರದೇಶ, ಆಲಮಟ್ಟಿ – 586 201, ತಾ॥ಬ.ಬಾಗೇವಾಡಿ, ಜಿ॥ವಿಜಯಪುರ
ಸಂಪರ್ಕ ಕಛೇರಿ: ಲೋಕೋಪಯೋಗಿ ಕಛೇರಿ ಪೂರಕ ಕಟ್ಟಡ, 3ನೇ ಮಹಡಿ, ಕೆ. ಆರ್. ವೃತ್ತ, ಬೆಂಗಳೂರು – 560001
ದೂರವಾಣಿ: 080–22244484 22277488, 22277393. ಟೆಲಿಫ್ಯಾಕ್ಸ್: 080–22219470 CIN:U85320KA1994SGC016101
ಜಾಲತಾಣ:www.kbjnl.karnataka.gov.in ಮಿಂಚಂಚೆ:edp@kbjnl.karnataka.gov.in

## 31.03.2022 ರಲ್ಲಿದ್ದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿಯ ವರದಿ

| ಕ್ರಮ ಸಂ. | ಯೋಜನೆಯ ಹೆಸರು | ಅಚ್ಚುಕಟ್ಟು ಕ್ಷೇತ್ರ (ಹೆ.) | ಇಲ್ಲಿಯವರೆಗೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾದ ಕ್ಷೇತ್ರ (ಹೆ.) | ಪ್ರಗತಿಯ ವಸ್ತುಸ್ಥಿತಿ |
|---|---|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 & 2 | 6,22,023 | 6,20,000 | ಪೂರ್ಣಗೊಂಡಿದೆ. |
| 2 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 | 5,94,000 | 92,500 | ಕೃಷ್ಣಾ ಮೇಲ್ದಂಡೆ ಯೋಜನೆ (ಕೃ.ಮೇ.ಯೋ) ಹಂತ–3ರಡಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಗುಲಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿಯ ಒಟ್ಟು 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವುದಾಗಿರುತ್ತದೆ. ಕರ್ನಾಟಕ ಸರ್ಕಾರದ ಅನುಮೋದನೆಯಂತೆ ಕೃ.ಮೇ.ಯೋ. ಹಂತ–3ರಡಿಯ ಉಪಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕೃಷ್ಣಾ ಜಲವಿವಾದ ನ್ಯಾಯಾಧೀಕರಣ–2 (KWDT-II) ತೀರ್ಪು ಕುರಿತು ಭಾರತ ಸರ್ಕಾರದ ಅಧಿಸೂಚನೆಯನ್ನು ನಿರೀಕ್ಷಿಸಲಾಗಿದೆ. ಅಂತರರಾಜ್ಯ ಜಲವಿವಾದ ನಾಯಾಧಿಕರಣ–2ವು ಕೃ.ಮೇ.ಯೋ.ಗಾಗಿ ಹಂಚಿಕೆಮಾಡಿರುವ 130 ಟಿಎಂಸಿ ನೀರನ್ನು ಉಪಯೋಗಿಸುವುದು ವಿಶೇಷ ಅನುಮತಿ ಅರ್ಜಿ ಹಾಗೂ ಇನ್ನಿತರೆ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ತೀರ್ಪಿಗೆ ಒಳಪಟ್ಟಿರುತ್ತದೆ. ಇದಲ್ಲದೇ, ಕೃ.ಮೇ.ಯೋ. ಹಂತ–3 ರಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನುಗಳ ಭೂಸ್ವಾಧೀನತೆ ಮತ್ತು 20 ಗ್ರಾಮಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣವೂ ಸಹ ಕೃಮೇಯೋ ಹಂತ–3ರಲ್ಲಿ ಒಳಗೊಂಡಿರುತ್ತದೆ. ಕೃ.ಮೇ.ಯೋ. ಹಂತ–3 ರಡಿಯ ಅನುಷ್ಠಾನಗೊಳಿಸಬೇಕಿರುವ 9 ಉಪ–ಯೋಜನೆಗಳ ಪೈಕಿ ಈಗಾಗಲೇ ಮುಳವಾಡ, ಚಿಮ್ಮಲಗಿ, ಇಂಡಿ, ರಾಂಪುರ, ಮಲ್ಲಾಬಾದ್, ಕೊಪ್ಪಳ ಹಾಗೂ ಹೇರಕಲ್ ಏತ ನೀರಾವರಿ ಯೋಜನೆಗಳು ಮತ್ತು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ್ ಉಪ ಯೋಜನೆಗಳು ಈಗಾಗಲೇ ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಇದರ ಜೊತೆಗೆ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್‌ನಿರ್ಮಾಣ ಮತ್ತು ಪುನರ್ವಸತಿ, ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ ಹಾಗೂ ಬಾಗಲಕೋಟೆ ಪಟ್ಟಣದಡಿಯ ಪನರ್ವಸತಿ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ. ಹೊಸ ಭೂಸ್ವಾಧೀನ ಕಾಯ್ದೆ, 2013 ರನ್ವಯ |

| | | | | |
|---|---|---|---|---|
| | | | | ಪ್ರಸಕ್ತ ಅನುಷ್ಠಾನಗೊಳಿಸುತ್ತಿರುವ ಯೋಜನೆಯಡಿಯ ಭೂಸ್ವಾಧೀನ ಹಾಗೂ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಲ್ಪಿಸಲು ಮುಳಗಡೆ ಹೊಂದುವ ಜಮೀನುಗಳಿಗೆ ಏಕ ರೂಪ ದರ ನಿಗಧಿಪಡಿಸುವ ನಿಟ್ಟಿನಲ್ಲಿ ಸಂಪುಟ ಉಪ-ಸಮಿತಿಯನ್ನು ರಚಿಸಲಾಗಿರುತ್ತದೆ. |
| 3 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | 38,750 | 38,493 | ಯೋಜನೆಯ ಮೊದಲನೇ ಹಂತ ಪೂರ್ಣಗೊಂಡಿದ್ದು, 14,493 ಹೆ. ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ ಹಾಗೂ ಪೂರ್ಣಗೊಂಡ ಕಾಲುವೆ ಜಾಲದಡಿ ನೀರನ್ನು ಹರಿಸಲಾಗಿರುತ್ತದೆ. ಯೋಜನೆಯ 2ನೇ ಹಂತದಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 24,000 ಹೆ. ಕ್ಷೇತ್ರಕ್ಕೆ ಸಾಂಪ್ರದಾಯಿಕ ಕಾಲುವೆ ಜಾಲದ ಬದಲಾಗಿ ಹನಿ ನೀರಾವರಿ ಕಲ್ಪಿಸಲು 2 ಪ್ಯಾಕೇಜ್‌ಗಳಡಿ ಕೈಗೆತ್ತಿಕೊಂಡ ಯೋಜನಾ ಕಾಮಗಾರಿಗಳು ಪೂರ್ಣಗೊಂಡಿದ್ದು, 2020ನೇ ಸಾಲಿನ ಮುಂಗಾರು ಹಂಗಾಮಿನಿಂದ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದ್ದು ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಲಾಗಿರುತ್ತದೆ. |
| 4 | ತಿಮ್ಮಾಪುರ ಏತ ನೀರಾವರಿ ಯೋಜನೆ | 20,100 | 17,881 | ಯೋಜನೆಯು ಪೂರ್ಣಗೊಂಡಿದ್ದು, ಬಾಗಲಕೋಟೆ ತಾಲ್ಲೂಕಿನಡಿ 17,881 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. |
| 5 | ತೆಗ್ಗಿ-ಸಿದ್ದಾಪುರ ಏತ ನೀರಾವರಿ ಯೊಜನೆ | 3,000 | 3,000 | ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 3,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 6 | ರೊಳ್ಳಿ-ಮನ್ನಿಕೇರಿ ಏತ ನೀರಾವರಿ ಯೋಜನೆ | 2,450 | 2,350 | ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 2,350 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 7 | ಸನ್ನತಿ ಏತ ನೀರಾವರಿ ಯೋಜನೆ | 16,000 | 10,625 | ಯೋಜನೆಯಡಿ ಮೂಲತಃ ಭೀಮಾ ನದಿಗೆ ಅಡ್ಡಲಾಗಿ ಸನ್ನತಿ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ ಕೈಗೊಳ್ಳಲು ಯೋಜನೆ ರೂಪಿಸಲಾಗಿರುತ್ತದೆ. ಈಗಾಗಲೇ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡಿದ್ದು, ನೀರನ್ನು ರೈತರು ತಮ್ಮ ಸ್ವಂತ ಪಂಪ್‌ಸೆಟ್ ಬಳಸಿ ನೀರಾವರಿ ಸೌಲಭ್ಯ ಪಡೆದುಕೊಳ್ಳುವ ಉದ್ದೇಶದಿಂದ ನೀರನ್ನು ಬ್ಯಾರೇಜ್‌ನಲ್ಲಿ ಸಂಗ್ರಹಿಸಲಾಗಿರುತ್ತದೆ. ಭೀಮಾ ನದಿ ಪಾತ್ರದಡಿ ಸನ್ನತಿ ಯೋಜನೆಗೆ ಸ್ಕೀಂ-ಎ ರಡಿ ಹಂಚಿಕೆಯಾಗಿರುವ 4.00 ಟಿಎಂಸಿ ನೀರಿನ ಸಂಪೂರ್ಣವಾಗಿ ಬಳಸಲು, ಸನ್ನತಿ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರವು 2005 ರಲ್ಲಿ ರೂ.188.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಸನ್ನತಿ ಏತ ನೀರಾವರಿ ಯೋಜನೆಯಲ್ಲಿ ಮುಖ್ಯ ಸ್ಥಾವರದ ಬಾಕಿ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಯೋಜನೆಯ ಕಾಲುವೆ ಜಾಲದಡಿ 1.75 ಕಿ.ಮೀ. ಉದ್ದದ ಫೀಡರ್ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 40.00, ಶಾಖಾ ಕಾಲುವೆ ಕಿ.ಮೀ. 0.00 ರಿಂದ 20.02, ವಿತರಣಾ ಕಾಲುವೆ ಸಂ.1 ಕಿ.ಮೀ. 10.00 ರಿಂದ 15.00 ಹಾಗೂ ಯರಗೋಳ ಮೈನರ್ ಕಾಲುವೆ ಕಾಮಗಾರಿಗಳ ಪ್ರಗತಿಯು ವಿವಿಧ ಹಂತಗಳಲ್ಲಿರುತ್ತವೆ. ಪ್ರಸ್ತುತ ಪೂರ್ಣಗೊಂಡಿರುವ ಕಾಲುವೆ ಜಾಲದಡಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಕೆರೆಗಳು ತುಂಬಿಸುವುದು ಒಳಗೊಂಡಂತೆ ಕಾಮಗಾರಿ ಪೂರ್ಣಗೊಂಡ ಕಾಲುವೆ ಜಾಲಗಳಲ್ಲಿ ನೀರನ್ನು ಹರಿಸಲಾಗಿರುತ್ತದೆ. ಸದರಿ ಯೋಜನೆಗೆ ಎ.ಐ.ಬಿ.ಪಿ.ರಡಿ ಕೇಂದ್ರದಿಂದ ಸಹಾಯಧನ ಪಡೆಯಲು ರೂ.673.00 ಕೋಟಿ |

| | | | | |
|---|---|---|---|---|
| | | | | ಅಂದಾಜು ಮೊತ್ತದ ಯೋಜನಾ ವರದಿಗೆ ಕೇಂದ್ರ ಜಲ ಆಯೋಗವು ತೀರುವಳಿ ನೀಡಿರುತ್ತದೆ. ಇದಲ್ಲದೇ ಯೋಜನೆಗೆ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯವು "ಪರಿಸರ ತೀರುವಳಿ" ಸಹ ನೀಡಿರುತ್ತದೆ. |
| **8** | ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) | **15,250** | **14,718** | ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) ಕಿ.ಮೀ. **0.00** ರಿಂದ **29.15** ಹಾಗೂ ಅರಕೇರಾ ಶಾಖಾ ಕಾಲುವೆ ಕಿ.ಮೀ. **0.00** ರಿಂದ **22.00** ರವರೆಗಿನ ಲ್ಯಾಟರಲ್ ಕಾಮಗಾರಿಗಳು ಒಳಗೊಂಡಂತೆ ಪೂರ್ಣಗೊಂಡಿದ್ದು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಮುಂದುವರೆದು, ಯೋಜನೆಯಡಿ ವಡವಟ್ಟಿ ಶಾಖಾ ಕಾಲುವೆ ಕಿ.ಮೀ. **0.00** ರಿಂದ **10.00** ಪೂರ್ಣಗೊಂಡಿದ್ದು, ಕಿ.ಮೀ.**10.00** ರಿಂದ **28.00** ರವರೆಗಿನ ಕಾಲುವೆ ಜಾಲದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಪೂರ್ಣಗೊಂಡ ಕಾಲುವೆ ಜಾಲಕ್ಕೆ ನೀರನ್ನು ಪ್ರಾಯೋಗಿಕವಾಗಿ ಹರಿಸಲಾಗಿದೆ. |
| **9** | ನಂದವಾಡಗಿ ಏತ ನೀರಾವರಿ ಯೋಜನೆ | **36,100** | **0** | ಯೋಜನೆಗೆ ಸರ್ಕಾರವು ದಿನಾಂಕ:**01.03.2014** ರಲ್ಲಿ ರೂ.**1530.00** ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಪ್ರಸ್ತುತ ನಂದವಾಡಗಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದ ಟರ್ನ್ ಕೀ ಆಧಾರದ ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಗಳನ್ನು **3** ಪ್ಯಾಕೇಜ್‌ಗಳಲ್ಲಿ ಬ್ಲಾಕ್–ಎ (**12,000** ಹೆ.), ಬ್ಲಾಕ್–ಬಿ (**12,500** ಹೆ.) ಮತ್ತು ಬ್ಲಾಕ್–ಸಿ (**11,600** ಹೆ.) ಕೈಗೆತ್ತಿಕೊಂಡು ಕಾಮಗಾರಿ ಪ್ರಗತಿಯಲ್ಲಿದೆ. |
| **10** | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ | **20,243** | **0** | ಸರ್ಕಾರವು ದಿನಾಂಕ:**20.07.2016** ರಲ್ಲಿ ರೂ.**840.00** ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಉದ್ದೇಶಿತ **20,243** ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ ಪೈಪ್‌ಲೈನ್ ಜಾಲ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. |
| **11** | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ ವಿಸ್ತರಣೆ | **17,805** | **0** | ಸರ್ಕಾರವು ಎಸ್‌ಸಿಪಿ/ಟಿಎಸ್‌ಪಿರಡಿ ದಿನಾಂಕ:**09.11.2020** ರಲ್ಲಿ ರೂ.**549.00** ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯು **17,805** ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಸ್ಕಾಡಾ ಸೇರಿದಂತೆ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| **12** | ನಾಗರಬೆಟ್ಟ ಏತ ನೀರಾವರಿ ಯೋಜನೆ | **3,200** | **0** | ಸರ್ಕಾರವು ದಿನಾಂಕ:**12.09.2017** ರಲ್ಲಿ ರೂ.**170.70** ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ |

| | | | | |
|---|---|---|---|---|
| | | | | ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ವಹಿಸಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| 13 | ಚಡಚಣ ಏತ ನೀರಾವರಿ ಯೋಜನೆ | 9,215 | 3,850 | ಸರ್ಕಾರವು ದಿನಾಂಕ:29.08.2016 ರಲ್ಲಿ ರೂ.413.20 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿ ಪ್ರಥಮ ಬಾರಿಗೆ ಉದ್ದೇಶಿತ 9,215 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪೈಪ್ ಲೈನ್ ಜಾಲದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಗೆ ಅವಶ್ಯವಿರುವ ನೀರನ್ನು ಸಂಗ್ರಹಿಸಲು ಉಮ್ರಾಣಿ ಹತ್ತಿರ ಬ್ಯಾರೇಜ್‌ಅನ್ನು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 14 | ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ | 6,100 | 0 | ಸರ್ಕಾರವು ದಿನಾಂಕ:08.11.2017 ರಲ್ಲಿ ರೂ.238.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಕೈಗೊಳ್ಳಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| 15 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | 700 | 0 | ಸರ್ಕಾರವು ದಿನಾಂಕ:12.09.2017 ರಲ್ಲಿ ರೂ.35.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಕೈಗೊಳ್ಳಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಕಾಲುವೆ ಜಾಲದ ಕಾಮಗಾರಿಗಳೂ ಸಹ ಪ್ರಗತಿಯಲ್ಲಿದೆ. |
| 16 | ಕೆರೂರ ಏತ ನೀರಾವರಿ ಯೋಜನೆ | 16,000 | 0 | ಸರ್ಕಾರವು ದಿನಾಂಕ:06.03.2021ರಲ್ಲಿ ರೂ.525.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯು 16,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಯೋಜನೆಯ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಲ್ಲಿದೆ. |
| | ಒಟ್ಟು | 14,20,936 | 8,03,417 | |

31.12.2021ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ ಸ್ವೀಕರಿಸಲಾದ/ಇತ್ಯರ್ಥವಾದ/ಬಾಕಿ ಉಳಿದ ಹೂಡಿಕೆದಾರರ ಕುಂದುಕೊರತೆಗಳ ವಿವರ – ಶೂನ್ಯ.

ನಿಗಮದಿಂದ ನೀಡಿಕೆ ಮಾಡಲಾದ ಸರಣಿ 2014–ಸಿ ಖಾಸಗಿ ನಿಯೋಜಿತ ಬಾಂಡುಗಳನ್ನು ನೀಡಿಕೆ ನಿಯಮಗಳ ಅನುಸಾರ ಕಾಲ್ ಆಪ್ಷನ್ ಆಯ್ಕೆ ಮೂಲಕ ದಿನಾಂಕ:31.12.2021 ರಂದು ಮರು ಪಾವತಿಸಲಾಯಿತು. ಸದರಿ ಮರು ಪಾವತಿಯೊಂದಿಗೆ ನಿಗಮದ ಎಲ್ಲಾ ಸರಣಿ ಬಾಂಡುಗಳನ್ನು ಮರು ಪಾವತಿಸಲಾಗಿರುತ್ತದೆ ಹಾಗೂ ಯಾವುದೇ ಸರಣಿ ಬಾಂಡುಗಳು ಮರು ಪಾವತಿಗೆ ಬಾಕಿ ಇರುವುದಿಲ್ಲ.

ಟಿಪ್ಪಣಿ: ಯೋಜನಾ ಕಾರ್ಯಪ್ರಗತಿಯು ತೃಪ್ತಿಕರವಾಗಿದೆ.

ದಿನಾಂಕ : 30.04.2022 ಸಹಿ/–
ಸ್ಥಳ : ಬೆಂಗಳೂರು ವ್ಯವಸ್ಥಾಪಕ ನಿರ್ದೇಶಕರು